# 'ನನ್ನ ಸಹೋದರಿಯರೆ, ಮತ್ತು ಸಹೋದರರರೆ' ಸಂಬೋಧನೆಯ ವಿಶೇಷತೆ

ಉಷಾ ಎಸ್. ಮೂರ್ತಿ

ಚಿಕಾಗೋ ಭಾಷಣವೆಂದರೆ ನೆನಪಾಗುವುದು ಸ್ವಾಮಿ ವಿವೇಕಾನಂದರು ಅಮೆರಿಕದಲ್ಲಿ ಮಾಡಿದ 'ಅಮೆರಿಕಾದ ನನ್ನ ಸಹೋದರಿಯರೆ ಮತ್ತು ಸಹೋದರರೇ' ಎಂಬ ಸಂಬೋಧನೆ. ಅದು ಅಷ್ಟು ಪ್ರಸಿದ್ಧವಾಗಲು ಕಾರಣವೇನು? ಈ ಕುರಿತು ಇಲ್ಲಿ ಚಿಂತಿಸಲಾಗಿದೆ. ಲೇಖಕಿ ಮೈಸೂರು ನಿವಾಸಿಗಳು, ಹಾಗೂ ಶ್ರೀರಾಮಕೃಷ್ಣ ಆಶ್ರಮದ ಭಕ್ತರು.



''ಅಮೆರಿಕದ ಸಹೋದರ ಸಹೋದರಿಯರೆ... ''

ಇದು ೧೮೯೩ರ ಸೆಪ್ಟೆಂಬರ್ ೧೧ರಂದು, ಅಮೇರಿಕಾ ದೇಶದ ಚಿಕಾಗೋ ನಗರದಲ್ಲಿ ನಡೆದ ಪ್ರಪಂಚದ ಸರ್ವಧರ್ಮ ಸಮ್ಮೇಳನದ ಸಭಿಕರನ್ನುದ್ದೇಶಿಸಿ, ಸ್ವಾಮಿ ವಿವೇಕಾನಂದರು ನುಡಿದ ಮಾತು. ಸ್ವಾಮೀಜಿಯವರ ಬಾಯಿಂದ ಈ ಮಾತುಗಳು ಹೊರಗೆ ಬಂದ ತಕ್ಷಣ ಏನಾಶ್ಚರ್ಯ, ಏನದ್ಭುತ! ಸಭಿಕರೆಲ್ಲಾ ಎದ್ದು ನಿಂತು ಕೆಲ ನಿಮಿಷ ಕಾಲ ಕಿವಿಗಡಚಿಕ್ಕುವಂತೆ ಚಪ್ಪಾಳೆ ತಟ್ಟಿದರು. ನಂತರ ಜಯಘೋಷ ಮಾಡುತ್ತಾ ತಮ್ಮ ಕರವಸ್ತ್ರ, ಟೋಪಿಗಳನ್ನು ಬೀಸುತ್ತಾ ಹರ್ಷೋದ್ಗಾರ ಮಾಡಿದರು. ಅವರಲ್ಲಿ ಒಂದು ಅದ್ಭುತ ಸ್ಫೂರ್ತಿ ಉಂಟಾಯಿತು.

ಈವರೆಗೆ ಯಾವ ಉಪನ್ಯಾಸಕರೂ ಈ ರೀತಿ 'ಸಹೋದರ ಸಹೋದರಿಯರೆ' ಎಂದು ಕರೆದಿರಲಿಲ್ಲ. ಈ ಸಂನ್ಯಾಸಿ ನಮ್ಮ ಧರ್ಮದವರೂ ಅಲ್ಲ, ನಮ್ಮ ದೇಶಕ್ಕೆ ಸೇರಿದವರೂ ಅಲ್ಲ ಆದರೆ ಅವರ ಹೃದಯವೈಶಾಲ್ಯವೆಷ್ಟಿದೆ ಎಂಬ ಅರಿವು ಅವರಿಗುಂಟಾಯಿತು. ಈ ಮೂರು ಪದಗಳ ಮೂಲಕ ಸ್ವಾಮೀಜಿಯವರಿಗೆ ಶ್ರೀರಾಮಕೃಷ್ಣರಿಂದ ಬಂದ ಆಧ್ಯಾತ್ಮಿಕಶಕ್ತಿ, ಆತ್ಮಸಾಕ್ಷಾತ್ಕಾರದಿಂದ ಪರಿಪೂರ್ಣಗೊಂಡ ವ್ಯಕ್ತಿತ್ವ, ಸುಂದರ ಚಿತ್ತಾಕರ್ಷಕರೂಪ, ಅಮೋಘ ವಾಕ್‌ಚಾತುರ್ಯ, ರಾಜಗಾಂಭೀರ್ಯ – ನೋಡುವ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿತು ಮತ್ತು ಅವರು ತಮ್ಮವರೆಂದೇ ಅನಿಸಿತು. ರೋಮಾರೋಲಾ ಅವರು ಸ್ವಾಮೀಜಿಯವರನ್ನು Toung of Flame (ಜ್ವಾಲಾನಾಲಿಗೆ) ಎಂದಿದ್ದಾರೆ.

ಈ ''ಸಹೋದರ, ಸಹೋದರಿ'' ಪದಗಳ ಹೆಗ್ಗಳಿಕೆ ಏನು? ಸ್ವಾಮೀಜಿಯವರ ಬಾಯಿಂದ ಹೊರಟ ಈ ವಾಕ್ಯಗಳಿಗೆ ಕಾರಣವೇನು? ಎಂಬ ಪ್ರಶ್ನೆ ಸಹಜವಾಗೇ ಏಳುತ್ತದೆ. ಆದರೆ ಈ ವಾಕ್ಯವೇ, ಅತಿ ಮುಂದುವರಿದ ದೇಶಗಳ ಮಧ್ಯೆ, ಆಧ್ಯಾತ್ಮಿಕ ನೆಲೆಯಾಗಿರುವ ಭರತಖಂಡವನ್ನು ಸಮ್ಮೇಳನದಲ್ಲಿ ಮೇಲ್ದರ್ಜೆಗೆ ಏರಿಸಲು ಕಾರಣವಾಯಿತು. ಈ ಪದಗಳು ವಿಶ್ವಭ್ರಾತೃತ್ವದ ಸಂಕೇತ. ಈ ವಿಶ್ವದ ಪ್ರಜೆಗಳೆಲ್ಲ ಲೋಕಮಾತೆಯ ಸಂತಾನ. ಸಹೋದರ ಸಹೋದರಿಯರ ಮಧ್ಯೆ ಪ್ರೀತಿ, ವಿಶ್ವಾಸ, ಸಹಿಷ್ಣುತೆ ಇರುತ್ತದೆ, ಇರಬೇಕು. ಆಯಾ ದೇಶ, ಭಾಷೆ, ಧರ್ಮಗಳಿಗೆ ತಕ್ಕಂತಿದ್ದರೂ, ಲೋಕಮಾತೆಯ ಸಂತಾನವಾದ ನಾವೆಲ್ಲರೂ ಭ್ರಾತೃತ್ವದ ಅರ್ಥವನ್ನು ತಿಳಿದು ವರ್ತಿಸಿದರೆ ಮಾತ್ರ ಶಾಂತಿ ಸಮನ್ವಯ ಉಂಟಾಗುತ್ತದೆ. ಸ್ವಾರ್ಥಬುದ್ಧಿಯ, ಸಂಕುಚಿತ ಅಹಂಕಾರವನ್ನು ಹೋಗಲಾಡಿಸಿಕೊಂಡಾಗ ಅನಂತತೆಯ ಅರಿವಾಗುತ್ತದೆ. ಇದೇ ವಿಶ್ವಾತ್ಮಭಾವ; ಸಹೋದರತ್ವದ ಸತ್ವವೇ ಇದು.

ನಂತರ ಸ್ವಾಮಿ ವಿವೇಕಾನಂದರು ತಮ್ಮ ಪುಟ್ಟ ಭಾಷಣದಲ್ಲಿ ಮೊದಲು ಎಲ್ಲ ಪಂಗಡ, ಮತ, ಧರ್ಮಕ್ಕೆ ಸೇರಿದ ಸಮಸ್ತ ಭಾರತೀಯರ ಪರವಾಗಿ ತಮ್ಮ ಕೃತಜ್ಞತೆಯನ್ನು ಸಭಿಕರಿಗೆ, ಆಯೋಜಕರಿಗೆ ತಿಳಿಸಿದರು. ಸಮ್ಮೇಳನಕ್ಕೆ ಬಂದಿರುವ ಎಲ್ಲ ರಾಷ್ಟ್ರಗಳ ಮಹನೀಯರಿಗೆ ವಂದನೆಗಳನ್ನು ತಿಳಿಸಿದರು. ''ವಿಶ್ವ

ಕ್ಕೆಲ್ಲ ಧಾರ್ಮಿಕ ಸಹಾನುಭೂತಿ, ಸಾರ್ವತ್ರಿಕ ಅಂಗೀಕಾರಗಳನ್ನು ಸಾರುವ, ಆಧ್ಯಾತ್ಮಿಕ ನೆಲೆಯಾಗಿರುವ ಧರ್ಮಕ್ಕೆ ಸೇರಿದವನು ನಾನು. ನಾವು ಎಲ್ಲ ಧರ್ಮಗಳನ್ನೂ ಸತ್ಯವೆಂದು ತಿಳಿಯುತ್ತೇವೆ. ಎಲ್ಲ ಜನಾಂಗ, ಧಾರ್ಮಿಕ ಪಂಥಗಳ ಕಷ್ಟಕೋಟಲೆಗಳಲ್ಲಿ ಸಿಕ್ಕಿರುವ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಿಕೊಟ್ಟಿರುವ ದೇಶ ನನ್ನದೆಂಬ ಹೆಮ್ಮೆ ನನ್ನದು. ರೋಮನ್ ಚಕ್ರಾಧಿಪತ್ಯದ ದೌರ್ಜನ್ಯದಿಂದ ಯಹೂದ್ಯರ ಪವಿತ್ರವಾದ ದೇವಾಲಯ ಯಾವಾಗ ನುಚ್ಚುನೂರಾಯಿತೋ ಆಗ ಅವರು ನಮ್ಮ ದಕ್ಷಿಣ ಭರತಖಂಡಕ್ಕೆ ಬಂದು ಆಶ್ರಯ ಪಡೆದರು. ಹಿಂದೆ ಝುರತುಷ್ಟ್ರ (ಪಾರ್ಸಿ) ಜನಾಂಗಕ್ಕೂ ಆಶ್ರಯವಿತ್ತು ಈಗಲೂ ಅವರನ್ನು ಪೋಷಿಸುತ್ತಿರುವುದು ನಮ್ಮ ಭಾರತದೇಶವೇ.

''ಸಹೋದರರೇ, ನಾವು ಚಿಕ್ಕಂದಿನಿಂದ ಪಠಿಸುತ್ತಿರುವ ಶ್ಲೋಕವೊಂದನ್ನು ನಿಮಗೆ ತಿಳಿಸುತ್ತೇನೆ:

**ತ್ರಯೀಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ**
**ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ ।**
**ರುಚೀನಾಂ ವೈಚಿತ್ರ್ಯಾದೃಜುಕುಟಿಲನಾನಾಪಥಜುಷಾಂ**
**ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ ॥**

'ಬೇರೆ ಬೇರೆ ಸ್ಥಳಗಳಲ್ಲಿ ಹುಟ್ಟುವ ಹಲವು ನದಿಗಳು ಕೊನೆಗೆ ಎಲ್ಲಾ ಸಾಗರಕ್ಕೆ ಸೇರುವಂತೆ, ಹೇ ಭಗವಂತನೇ, ಮಾನವರು ಅವರವರ ಸಂಸ್ಕಾರಗಳಿಗೆ ತಕ್ಕಂತೆ ಅನುಸರಿಸುವ, ನೇರವಾಗಿಯೋ ವಕ್ರವಾಗಿಯೂ ಇರುವ ಬೇರೆ ಬೇರೆ ದಾರಿಗಳೆಲ್ಲ ನಿನ್ನಡೆಗೆ ಕರೆದೊಯ್ಯುವವು.'

ಅನೇಕ ಧರ್ಮ, ಪಂಥ, ಮತ ರಾಷ್ಟ್ರಗಳಿಗೆ ಎಲ್ಲಾ ಪ್ರಜೆಗಳೂ ಸಹೋದರತ್ವವನ್ನು ಪಾಲಿಸಿದರೆ, ಮೇಲೆ ಹೇಳಿದ ಶ್ಲೋಕದ ಅರ್ಥದಂತೆ ಕೊನೆಗೆ ಹಿಂಸೆ, ಪರಧರ್ಮನಿಂದೆ, ಇವುಗಳಿಂದ ಮುಕ್ತವಾಗಿ ಭಗವಂತನೆಡೆಗೆ ಸಾಗಬಹುದು. ಈಗ ದೇಶಗಳಲ್ಲೆಲ್ಲಾ ಕ್ರೌರ್ಯ ಹೆಚ್ಚಿದೆ. ಅನ್ಯಾಯವು ಹರಡಿಕೊಂಡಿದೆ. ಆದರೆ ನಾವುಗಳು ಒಂದಾಗಿ ಸಹೋದರರಂತಿದ್ದರೆ ಶಾಂತಿಯಿಂದ ಬಾಳಬಹುದು.

ಅತಿಯಾದ ಧರ್ಮಾಂಧತೆ, ಸ್ವಾಭಿಮಾನ, ಗುಂಪುಗಾರಿಕೆಯ ಪರಿಣಾಮದಿಂದ ನಾವು ಸೋದರತ್ವದ ಪ್ರೀತಿ, ವಿಶ್ವಾಸಗಳನ್ನೇ ಮರೆತುಬಿಟ್ಟಿದ್ದೇವೆ. ಇದರಿಂದ ಈಗ ನಾವು ಹೇಳುವ ನಾಗರಿಕತೆಯೇ ನಾಶವಾಗಿದೆ. ಬದಲಾಗಿ ಎಲ್ಲ ದೇಶಗಳಲ್ಲಿ ನಿರಾಶೆಯೇ ತುಂಬಿದೆ. ಈಗಿನ ಮಾನವ ಸಮಾಜವು ಈ ಘೋರ ರಾಕ್ಷಸತನವನ್ನು ಬಿಟ್ಟು ಭ್ರಾತೃತ್ವವನ್ನು ಬೆಳೆಸಿಕೊಂಡರೆ, ಇನ್ನೂ ಹೆಚ್ಚು ಮುಂದುವರಿಯಲು ಅವಕಾಶವಾಗುತ್ತದೆ. ಸಹೋದರತ್ವ ಎಂಬ ಪದದ ಮಹತ್ವವೂ ಹೆಚ್ಚಾಗುತ್ತದೆ.



**ಅಂತರಂಗದಲ್ಲಿ ಭಕ್ತಿ ಇರಲಿ, ಕುತಂತ್ರ ಮತ್ತು ವೇಷ ಇವುಗಳನ್ನು ತ್ಯಜಿಸಿ. ಯಾರು ಆಫೀಸಿನಲ್ಲಿ ಅಥವಾ ವ್ಯಾಪಾರದ ವ್ಯವಹಾರದಲ್ಲಿರುವರೋ ಅವರು ಕೂಡ ಸತ್ಯಸಂಧರಾಗಿರಬೇಕು. ಕಲಿಯುಗದಲ್ಲಿ ಸತ್ಯವೇ ತಪಸ್ಸು.**

**— ಶ್ರೀರಾಮಕೃಷ್ಣರು**



**ದೇವರನ್ನು ಹೊರತಾದ ಯಾವುದೇ ವಸ್ತುವಿನ ಕಡೆಗೆ ಮನಸ್ಸು ಹರಿದರೆ, ಆ ವಸ್ತು ಕ್ಷಣಿಕವೆಂದು ಭಾವಿಸು. ಅನಂತರ ಮನಸ್ಸನ್ನು ಭಗವಂತನ ಪವಿತ್ರವಾದ ಪಾದಪದ್ಮಗಳಿಗೆ ಅರ್ಪಿಸಿ ಶರಣಾಗತನಾಗು.**

**— ಶ್ರೀಮಾತೆ ಶಾರದಾದೇವಿ**



**ಜೀವನದಲ್ಲಿ ನಮಗೆ ಶ್ರೇಷ್ಠವಾದ ಮಾರ್ಗದರ್ಶಕವೇ ಶಕ್ತಿ. ಇತರ ಕಡೆಗಳಲ್ಲಿರುವಂತೆ ಧರ್ಮಕ್ಷೇತ್ರದಲ್ಲಿಯೂ ನಿಮ್ಮನ್ನು ದುರ್ಬಲರನ್ನಾಗಿ ಮಾಡುವುದನ್ನೆಲ್ಲಾ ತ್ಯಜಿಸಿ. ಅದರೊಂದಿಗೆ ಯಾವ ವ್ಯವಹಾರವನ್ನೂ ಇಟ್ಟುಕೊಳ್ಳಬೇಡಿ.**

**— ಸ್ವಾಮಿ ವಿವೇಕಾನಂದ**